doc-37
T-P-2

Regd No M 1229 | 43rd Year | Sri 'Satyavadi' Mysore | 21—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಬುನೆ ಸಿಂಸ್ಮೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ವತಿ ಮತು ಅಂಗಡಿ ತೆರಿಗೆ ವಿಧಿಸಲು ಪುರಸಬೆಯ ನಿರ್ಧಾರ

ವೃತ್ತಿ ತೆರಿಗೆ
ಅಂಗಡಿ ತೆರಿಗೆ

ಮೈಸೂರು 20— ವೃತ್ತಿ ತೆರಿಗೆ ಮತ್ತು ಅಂಗಡಿ ತೆರಿಗೆಯನ್ನು ವಿಧಿಸಲು ಪುರಸಭಾಧ್ಯಕ್ಷ ಕೆಂಗೇಗೌಡರ ಅಧ್ಯಕ್ಷತೆಯಲ್ಲಿ ಸೇರಿದ ಪೌರಸಭಾ ಆಯವ್ಯಯ ಅಧಿವೇಶನ ನಿರ್ಧರಿಸಿತು — ಮಾಹೆಯಾನ ರೂ. 500 ಮತ್ತು ಅದಕ್ಕೆ ಮೇಲ್ಪಟ್ಟು ವಂಮಾನ ಇರುವವರಿಗೆ ವೃತ್ತಿ ತೆರಿಗೆಯನ್ನು ವಿಧಿಸಬೇಕೆಂದೂ ವಾರ್ಷಿಕ ತೆರಿಗೆ ರೂ 25 ರಿಂದ 100 ರವರೆಗೆ ಇಂಬೇಗಂದೂ ತೀರ್ಮಾನವಾಯಿತು — ಮಾಹೆಯಾನ ಬಾಡಿಗೆ ದರದ ಮೇಲೆ ಅಂಗಡಿ ತೆರಿಗೆ ವಿಧಿಸಬೇಕೆಂದೂ, ವಾರ್ಷಿಕ ತೆರಿಗೆ ರೂ 20 ರಿಂದ 50 ರವರೆಗೆ ಇರಬೇಕೆಂದೂ ತೀರ್ಮಾನವಾಯಿತು — ಸಂಯುಕ್ತ ಪೌರಪಕ್ಷದ ನಾಯಕರಾದ ಶ್ರೀ ಎಸ್. ಹುಸೇನರು, ತೆರಿಗೆ ವಿಧಿಸುವದನ್ನು ವಿರೋಧಿಸಿ ಈಗಾಗಲೇ ತೆರಿಗೆಗಳು ಜನರಿಗೆ ಎಷ್ಟಿವೆಯಾ ಹೊರೆಯಾಗಿದೆ, ಜನರಿಗೆ ಇನ್ನೊಂದು ಕಾಸು ತೆರಿಗೆ ಕೊಡುವ ಸಾಮರ್ಥ್ಯವಿಲ್ಲ, ಎಂದು ನುಡಿದು, ತಮ್ಮ ಪಕ್ಷ ದೊಡನೆ ಸಭಾಪರಿತ್ಯಾಗಮಾಡಿದರು

ಸದಸ್ಯರಿಗೆ ಫೋರ್ಡ್

ಮೈಸೂರು ಪುರಸಭಾ ಸದಸ್ಯರಿಗೆ ಫೋರ್ಡ್ ಕಾರನ್ನು ಸಾಲಕ್ಕೆ ಒದಗಿಸಲು ಪೌರಸಭೆ ಆ 40ಂಕ್ಕೆ ಅವಕಾಶಮಾಡಿದೆ.

ಶೃಂಗೇರಿ ಜಹಗೀರಿಗೆ ಕೊಡುವ ಪರಿಹಾರ ಮುಂತಾದ್ದು ಎಲ್ಲಾ ಪರಿಶೀಲನೆಯ ಅಧಿಕಾರ ಸ್ಥಳೀಯ ಪೊಲೀಸರಿಗೆ ಇರುವುದೆಂದೂ, ಎಂದು ಸ್ಪಷ್ಟ ಹಿಡಿಯುವುದೆಂದೂ ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

ಡಲ್ಯೂ ಲಾಮೂರು

ವಾರಣಾಸಿ 20 — ವಿಶ್ವಶಾಂತಿಗೆ ಬೌದ್ಧ ಆದರ್ಶವನ್ನು ಅನುಸರಿಸಬೇಕೆಂದು ದಲಾಯಿ ಲಾಮಾ ತಿಳಿಸಿದರು. ಲಾಪ್ಸಾರಿಗೆ ಶುಭಕೋರಲು 6 ಭಾಷ್ಯಗಳು ಸಂಸ್ಕೃತ ಶ್ಲೋಕಗಳನ್ನು ಹಾಡಿದರು.

ಪಾಕಿಸ್ತಾನಕ್ಕೆ

ಲಂಡನ್ 20 — ಪಾಕಿಸ್ತಾನಕ್ಕೆ ಅಧ್ಯಕ್ಷ ಮಾದರಿ ಪ್ರಜಾಪ್ರಭುತ್ವ ಇರಬೇಕೆಂದು ಪಾಕಿಸ್ತಾನದ ಅಧ್ಯಕ್ಷ ಜ|| ಅಯೂಬ್ ಖಾನ್ ಇಚ್ಛಿಸಿದ್ದಾರೆ

ಚಿನ್ನವಶ

ಕಾರ್ವಾರ 17— ಅಂಕೋಲಾದಿಂದ ಹುಬ್ಬಳ್ಳಿಗೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಇಬ್ಬರು ಪ್ರಯಾಣೀಕರಿಂದ ಕೇಂದ್ರ ಎಜ್ಯಾರಿ ಪ್ಲೈಯಿಂಗ್ ಸ್ಕ್ವಾಡಿನವರು ರೂ 6776 ಮೌಲ್ಯದ 56 ತೊಲ ಬಂಗಾರ ವಶಪಡಿಸಿಕೊಂಡರು — ಈ ಪ್ರಯಾಣೀಕರು ಅಕ್ರಮವಾಲಿಗರೆಂದೂ, ಅಕ್ರಮವಾಗಿ ಸಾಗಿಭುತ್ತಿದ್ದರೆಂದೂ ಹೇಳಲಾಗಿದೆ.

ನೆಹ್ರೂರಿಗೆ ಹಾರಿತೋಷಕ

ವಾರ್ಧಾ 20— ಈ ಬೆಳಿಗ್ಗೆ ಪಂ|| ನೆಹರು ಸ್ಥಳೀಯ ಬಾಲಭವನಕ್ಕೆ ಭೇಟಿ ಕೊಟ್ಟಾಗ ಅಲ್ಲಿಯ ಮಕ್ಕಳು ಅವರಿಗೆ ಒಂದು ರೈಟಿಂಗ್ ಪ್ಯಾಡನ್ನು ಪರಿತೋಷವಾಗಿ ಸಮರ್ಪಿಸಿದರು. ಅಲ್ಲೇ ತಯಾರಾದ ಕಾಗದದಿಂದ ಪ್ಯಾಡನ್ನು ಮಕ್ಕಳು ಮಾಡಿದ್ದರು

ಶಾಲೆಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ
22 ಚತುರ್ದಶಿ ಹಸ್ತ

ಬ್ಯಾಂಕ ರಾಷ್ಟ್ರೀಕರಣ

ನವ ದೆಹಲಿ 20 — ದೇಶದಲ್ಲಿರುವ ಬ್ಯಾಂಕುಗಳ ರಾಷ್ಟ್ರೀಕರಣ ಲಾಭದಾಯಕವಲ್ಲವೆಂದು ಕೇಂದ್ರ ಹಣಕಾಸು ಮುಖ್ಯ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ತಿಳಿಸಿದ್ದಾರೆ ಭಾರತ ದಿವಾಳಿ ಆಗಿಲ್ಲವೆಂದು ಅವರು ತಿಳಿಸಿದ್ದಾರೆ

ಲಾಸಾದಲ್ಲಿ ಕಾವಲು

ಸಿಲಿಗುರಿ 20 — ಲಾಸಾ ಮತ್ತು ದರ ಮುತ್ತಮುತ್ತ ಇರುವ 50 ಸಾವಿರ ಟಿಬೆಟ್ಟಿನವರು ಕಾವಲಿಗೆ 60 ಸಾವಿರ ಚೀನಿ ಸೇನೆ ಇದೆ.

ಹೆಚ್ಚು ಸಂಬಳಕ್ಕೆ ಪ್ರತಿಭಟನೆ

ಸಿಡ್ನಿ 20— ಪಾರ್ಲಿಮೆಂಟು ಸದಸ್ಯರಿಗೆ ಈಗ ಇರುವ 1880 ವಾರ್ಷಿಕ ಸಂಬಳವನ್ನು 2250 ಪೌಂಡುಗಳಿಗೆ ಹೆಚ್ಚಿಸಬೇಕೆಂದಿರುವ ಯೋಜನೆಯನ್ನು ಆಸ್ಟ್ರೇಲಿಯಾದ ತೆರಿಗೇದಾರರ ಸಂಘಗಳೂ, ಪತ್ರಿಕೆಗಳೂ, ಕಾರ್ಮಿಕ ಸಂಘಗಳೂ ಪ್ರತಿಭಟಿಸುತ್ತಿವೆ.

ಎರಡೂವರೆ ಲಕ್ಷ ರೂಗಳು

ನವೆಂಬರು 1 ರಿಂದ ಮಹಾರಾಷ್ಟ್ರಿಯರು ಹೂಡಿರುವ ಸತ್ಯಾಗ್ರಹ ಸಂಬಂಧವಾಗಿ ಸರಕಾರಕ್ಕೆ ಎರಡೂವರೆ ಲಕ್ಷ ರೂಗಳು ಖರ್ಚಾಗಿದೆಯೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

ಗುಂಡಿನೇಟಿಗೆ ಆಹುತಿ

ಪಾಟ್ನಾ 20 — ಸೀತಾಮಾರ್ಹಿ ಸಬ್ಡಿವಿಜನ್ನಿನ ಬೈರಾಗ್ನಿಯು ಥಾಣಾದ ಲಕ್ಕ ಗ್ರಾಮದಲ್ಲಿ ಪೋಲೀಸರು ಗುಂಡು ಹಾರಿಸಿದ ಕಾರಣ 4 ಜನರು ಮರಣ ಹೊಂದಿ ಕೆಲವರು ಗಾಯಗೊಂಡಿರುವರು.

ಡಲ್ಲೆ ಲಾಮೂರ ಹೇಳಿಕೆ ಬಗ್ಗೆ

ಹಾಂಗ್ ಕಾಂಗ್ 20 — ತೇಜಪುರದಲ್ಲಿ ಕಳೆದ ಶನಿವಾರ ದಲಾಯಿ ಲಾಮರು ಕೊಟ್ಟ ಹೇಳಿಕೆ ಸುಳ್ಳಿನಿಂದ ಕೂಡಿದೆಯೆಂದು ನವ ಚೀನ ವಾರ್ತಾ ಏಜೆನ್ಸಿ ತಿಳಿಸಿದೆ. ಸಾಮ್ರಾಜ್ಯಶಾಹಿಗಳ ಆಶೆ ಲಾಮಾ ಹೇಳಿಕೆಯಿಂದ ಪ್ರತಿಬಿಂಬಿತವಾಗಿದೆ ಎಂದು ಅದು ತಿಳಿಸಿದೆ

ಸಕ್ಕರೆ ಕಾರ್ಖಾನೆಗಳು

ಬೆಂಗಳೂರು 20 — ವಿಧಾನ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಹೇಳಿಕೆಯಿತ್ತು, ಪಂಕ್ತೇಶ್ವರದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗುವದಾಗಿ ನುಡಿದರು.

ಲಾಮೂರು ನಾರಾನಾಥವಲ್ಲಿ

ಶ್ರಾವಸ್ತಿ 20 —ಬುದ್ಧದೇವನು ತನ್ನ ಪ್ರಥಮ ಧರ್ಮೋಪದೇಶವನ್ನಾಡಿದ ಈ ಸ್ಥಳಕ್ಕೆ ದಲೈ ಲಾಮೂರು ಆಗಮಿಸಿ, ಈ ಪ್ರಖ್ಯಾತ ಬೌದ್ಧ ಯಾತ್ರಾ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ದಯಾಭಿಕ್ಷೆ

ನವದೆಹಲಿ 20— 1958 ರಲ್ಲಿ ಅಧ್ಯಕ್ಷರು 48 ಮರಣ ದಂಡನೆಗಳಲ್ಲಿ ದಯೆ ತೋರಿ ಜೀವಾವಧಿ ಶಿಕ್ಷೆಗೆ ಮಾರ್ಪಡಿಸಿದರು — 175 ದಯಾಭಿಕ್ಷೆ ಅರ್ಜಿಗಳು ಬಂದಿದ್ದವು.

ಪಬ್ಲಿಕ್ ಡೆಟ್ ?

ಕಲ್ಕತ್ತಾ 20 — ರಿಜರ್ವು ಬ್ಯಾಂಕಿನ ಪ್ರಕಟಣೆ ಪ್ರಕಾರ ಭಾರತದ ಸಾಲ 58—60 ನೇಯ ಸಾಲಿನಲ್ಲಿ 4046 ಕೋಟಿ ಗಳಾಗುವುದು.

ಅಂಬರ್ ಚರಕ

ನವದೆಹಲಿ 20— 2-93 ದ ಶ ಲ ಕ್ಷ ಪೌಂಡುಗಳಷ್ಟು ನೂಲನ್ನು 19-80 ದಶ ಲಕ್ಷ ಗಜಗಳಷ್ಟು ಬಟ್ಟೆಯನ್ನೂ 58-59 ರಲ್ಲಿ (1959 ರ ಪೆಬ್ರವರಿ ಕೊನೆಯ ವರೆಗೆ) ಅಂಬರು ಚರಕದಿಂದ ಉತ್ಪಾದಿಸಲಾಯಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು — 58—59 ರಲ್ಲಿ ಚರಕಾ ಕಾರ್ಯಕ್ರಮಗಳಿಗಾಗಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು 680-23 ಲಕ್ಷ ರೂಗಳನ್ನು ಸಾಲವನ್ನಾಗಿಯೂ 177-75 ಲಕ್ಷ ರೂಗಳನ್ನು ಸಹಾಯಧನವನ್ನಾಗಿಯೂ ಉಪಯೋಗಿಸಿತು ಎಂದು ತಿಳಿಸಲಾಯಿತು ; 67282 ಅಂಬರು ಚರಕಗಳನ್ನು ತಯಾರಿಸಲಾಯಿತು : 79045 ಅಂಬರು ಚರಕಗಳನ್ನು ಹಂಚಲಾಯಿತು — 58-60 ರಲ್ಲಿ ಅಂಬರು ಚರಕಾ ಕಾರ್ಯಕ್ರಮದಿಂದ 40 ದಶಲಕ್ಷ ಗಜಗಳಷ್ಟು ಬಟ್ಟೆಯನ್ನು ತೆಗೆಯಬೇಕೆಂಬ ಗುರಿ ಇಟ್ಟುಕೊಳ್ಳಲಾಗಿದೆಯೆಂದೂ ತಿಳಿಸಲಾಯಿತು.

ತೇಲುವ ಬಂದರು

ಕಪ್ಪುಕಡಲಿನ ಬಳಿ ನೀಪರು ನದೀ ಮುಖಜ ಭೂಮಿಯು ಮೇಲಿನ ಖೆರ್ಸನ್ ಬಂದರು ಕಟ್ಟೆಯಲ್ಲಿ ಪ್ರಪಂಚದ ಅತ್ಯಂತ ದೊಡ್ಡ ಕಬ್ಬಣ ಭದ್ರಾಣಿಯ ಬಂದರು ಕಟ್ಟೆಯನ್ನು ನಿರ್ಮಿಸಲಾಯಿತು ; ಅದನ್ನು ಕಾಸ್ಪಿಯನ್ ತೀರಕ್ಕೆ ವೋಲ್ಗಾ ಡೋನ್ ಮಾರ್ಗವಾಗಿ ಸಾಗಿಸಲು, ಆ ಕಾಲುವೆಯು ಯಾನಕ್ಕೆ ತಕ್ಕಂತೆ ಈ ಬಂದರನ್ನು ಭವಗಭಾಗಗಳಾಗಿ ತಯಾರಿಸಿ, ನೀರಿನ ಮೇಲೆ ತೇಲಿಸಿ ಸಾಗಿಸಲಾಗಿತು ; ಬಂದರು ನಿರ್ಮಾಣದಲ್ಲಿ ಇದು ಅಭೂತಪೂರ್ವ ವಿಧಾನ : ಬಾಕು ತಲಪಿದ ಮೇಲೆ ಈ ನಾಲ್ಕು ಬಿಡಿ ಭಾಗಗಳನ್ನು ಕಂಬಾಂವಾಕಾಗಿ ಜೋಡಿಸಲಾಯಿತು ; ಈ ಬಂದರು ಅಗ್ಗವೂ, ಬಹಳ ಬಾಳಿಕೆ ಬರುವಂತಹುದೂ ಆಗಿದೆ ; ಇದಂ ಕಾರ್ಯ ಸಾಧನವೆಲ್ಲಾ ಯಂತ್ರೀಕರಿಸಲಾಗಿದೆ.

ಲಂಡನ್ 18— ಲಂಡನ್ ಸಾರ್ವಜನಿಕ ಪುಸ್ತಕಭಂಡಾರಗಳು ಒದುವರಿಗೆ ಯಾವ ಪುಸ್ತಕವನ್ನು ಬೇಕಾದರೆ ಒದಗಿಸಬಲ್ಲವೆಂದು ವರದಿಯಾಗಿದೆ.

ಗೋರಕ್ಷಣ ಪತ್ರಿಕೆಗೆ ಜೆಂಬಲಿಗರಾಗಿರಿ

ಯೋಜನೆಗೆ ಹಣ

ಭಾರತದ ಪ್ರತಿಯೊಬ್ಬ ಉದ್ಯೋಗಿ ನಗರೀಕನೂ ತನ್ನ ಪ್ರತಿ ಹತ್ತು ದಿನಗಳ ಸಂಪಾದನೆಯಲ್ಲಿ ಒಂದು ದಿನದ ಸಂಪಾದನೆಯನ್ನು ಸರ್ಕಾರಕ್ಕೆ ಒಪ್ಪಿಸಿಬಿಡುತ್ತಾನೆ ; ಪ್ರತಿ ತಿಂಗಳ ಆದಿಭಾಗದ ಶರುವಾಯು ಪ್ರತಿ ಎಂಟು ದಿನಗಳ ಪೈಕಿ ಇದರಿಂದ ಏಳು ದಿನಗಳ ದುಡಿಮೆಯನ್ನು ಸರ್ಕಾರಕ್ಕೆ ಹಣ ಒಪ್ಪಿಸಲೆಂದೇ ನಿರ್ವಹಿಸುವ ಸ್ತ್ರೀಪುರುಷರೂ ಸಾಕಷ್ಟು ಸಂಖೆಯಲ್ಲಿದ್ದಾರೆ ; ತಿಂಗಳಿಗೆ ಮೂರು ಲಕ್ಷ ರೂಗಳ ನಿವ್ವಳ ಆದಾಯ ಬರತ್ತದೆ ಎಂದಿಟ್ಟುಕೊಂಡರೆ ಎಲ್ಲಾ ತೆರಿಗೆಗಳನ್ನು ಕೊಟ್ಟು ಕೊನೆಗೆ ಅವರಿಗೆ ಉಳಿಯುವ ಆದಾಯ 75000 ರೂಗಳು ಮಾತ್ರ ; ಈ ಆದಾಯದ ಮೂಸ್ಯ ತಾನು ಸಂಪಾದನೆಗಾಗಿ ದುಡಿಯುವ ನಾಲು ದಿನಗಳ ಪೈಕಿ ಮೂರು ದಿನಗಳ ಸಂಪಾದನೆಯನ್ನು ಸರ್ಕಾರಕ್ಕೆ ಒಪ್ಪಿಸುತ್ತಾನೆ ; ಹೀಯತಾಗಿ ಅವನಿಗೆ ಮತ್ತು ಅವನ ವಡದಿ ಮಕ್ಕಳಿಗೆ ಕೊನೆಗೆ ಕೈಗುಳಿಯುವದು ನಾಲು ದಿನಗಳಿಗೆ ಒಂದು ದಿನದ ಸಂಪಾದನೆ ಮಾತ್ರ ! ಸಮಾಜವಾದಿ ಸಮಾಜ ವ್ಯವಸ್ಥೆಯು ಸ್ಥಾಪನೆ ದೃಷ್ಟಿಯಿಂದ ಈ ಪ್ರಶ್ನೆಯನ್ನು ನಾವು ನೋಡಬೇಕಾಗುತ್ತದೆಯಲ್ಲದೆ ಆದೇ ಒಂದು ಆಧಾರದ ಮೇಲೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆಯವ್ಯಯದ ಅಂದಾಜನ್ನು ರೂಪಿಸಬೇಕಾಗಿರುತ್ತದೆ

ಅಪೆರಾ— 21—4—59 ರಿಂದ

ಜಯಸಿಂಹ ತೆಲುಗು

ನಟವರ್ಗ— ಎಸ್ ಟಿ ರಾಮರಾವ್, ಅಂಜಲಿ

ಪ್ರತಿದಿನ 3 ಆಟಗಳು

ವುಡ್‌ಲ್ಯಾಂಡ್ಸ್

ಜನಭರಿತ 3 ನೇ ವಾರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

ಬಹು ದಿನಗಳಿಂದ ಎದುರುನೋಡುತ್ತಿದ್ದ ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]

SHAKTI SUDHA

A Superb Tonic

Edited, Printed & Published by Dharma Prachara Nirata M S Krishna Rao, at the Satyavadi Press Chamarajapuram, Mysore

ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರು ಸೋವಿಯಟ್ ಸರಕಾರಿ ನಿಯೋಗದ ನಾಯಕ ಎ ಎ ಆಂದ್ರೆಯೆವ್ ಮತ್ತು ಎಕ್ ನುಖಿತ್‌ದಿನೋವ್‌ರವರೊಂದಿಗೆ ಮಾತನಾಡುತ್ತಿರುವುದು